ಅಣ್ಣ ಆಗ ಪೂನಾದಲ್ಲಿ ಕೆಲಸ ಮಾಡ್ತಿದ್ದ. ನನ್ನ ಮೂರು ವರ್ಷದ ಮಗಳು ತನ್ನ ಹನ್ನೆರಡು ವರ್ಷದ ಅಣ್ಣನಿಗೆ ರಜೆ ಸಿಕ್ಕಿತು ಅಂದಕೂಡಲೇ ಮಾಮನ ಮನೆಗೆ ಹೋಗುವ ಅಂತ ರಚ್ಚೆ ತೆಗೀತಿದ್ಳು.

ನಿಜ ಹೇಳ್ಬೇಕೂಂದ್ರೆ ಕೂಡು ಕುಟುಂಬದ ಮುಗಿಯದ ಮನೆಕೆಲಸಗಳಿಂದ ಬೇಸತ್ತು ಹೈರಾಣಾಗಿರುತ್ತಿದ್ದ ನಾನೇ ಮಗಳಿಗೆ ಕಿವಿ ಚುಚ್ಚಿ ಹೀಗೆ ತಾತ ಅಜ್ಜಿಯ (ಅತ್ತೆ ಮಾವನ) ಮುಂದೆ ಅತ್ತು ಹಟ ಮಾಡಬೇಕೆಂದು ಹೇಳಿಕೊಟ್ಟಿರುತ್ತಿದ್ದೆ. ಅಂತೂ ಅತ್ತೆ ಮಾವ ಕರಾರಿನ ಮೇಲೆ ಒಪ್ಪಿ, ಮಗನ ರಜೆ ಶುರುವಾದ ವಾರದೊಳಗೆ ನಾನು ಪೂನಾ ಪ್ರಯಾಣಕ್ಕೆ ಅಣಿಯಾಗ್ತಿದ್ದೆ.

ಎಲ್ಲವೂ ಲೆಕ್ಕಾಚಾರದಲ್ಲೇ ನಡೆಯುತ್ತಿದ್ದ ಕಾಲ. ನಾನೂ ಹೆಚ್ಚೇನೂ ಅಪ್ಡೇಟ್ ಆಗಿರಲಿಲ್ಲ. ಆಗ ಪೂನಾಗೆ ಹೋಗೋದು ಅಂದರೆ ಭಾರೀ ಸುದೀರ್ಘ ಪ್ರಯಾಣ ಅನ್ನುವ ಹಾಗೆ. ಊರಿಂದ ಬಸ್ಸು ಬರುವ ಪಕ್ಕದ ಸಣ್ಣ ಪೇಟೆಗೆ, ಅಲ್ಲಿಂದ ಬಸ್ ಹತ್ತಿ ಹಾಸನ, ಅಲ್ಲಿಂದ ಬೆಂಗಳೂರು. ಬೆಂಗಳೂರಿನಿಂದ ಪೂನಾಗೆ ಟಿಕೆಟ್ ಬುಕ್ ಮಾಡಿ ಅಣ್ಣ ಕಳಿಸಿರ್ತಿದ್ದ. ನಾನು ಬೆಂಗಳೂರು ತಲುಪುವಷ್ಟರಲ್ಲಿ ಸುಮಾರು ಆರು ತಾಸು ಕಳೆಯುತಿತ್ತು. ಟಿಕೆಟ್ ಬುಕ್ ಆಗಿರೋದ್ರಿಂದ ಅಲ್ಲಿಗೆ ಅರ್ಧ ಗಂಟೆ ಮೊದಲೇ ಇರಬೇಕು ಅನ್ನೋ ದೃಷ್ಟಿಯಲ್ಲಿ ಎಲ್ಲೂ ಸಮಯ ವ್ಯರ್ಥ ಮಾಡೋ ಹಾಗಿರಲಿಲ್ಲ. ಅದೂ ಅಲ್ಲದೇ ಸಣ್ಣ ಮಕ್ಕಳೊಂದಿಗೆ ಪ್ರಯಾಣ.

ಮನೆಯಿಂದ ಹೊರಡೋ ಮೊದಲು ಮೂರು ನಾಲ್ಕು ಬಾರಿಯಾದರೂ 'ಒನ್ನಿಗೆ ಹೋಗಬನ್ನಿ' ಅಂತ ಇಬ್ರಿಗೂ ಹೇಳಿ ಹೇಳಿ, 'ಬರದಿದ್ದು ಎಲ್ಲಿಂದ ಹೋಗ್ತಾರೆ' ಅಂತ ಅತ್ತೆಯಿಂದ ಬಯ್ಸಿಕೊಳ್ತಿದ್ದೂ ಆಗಿ, ನಾನೂ ಆಗಿನ್ನೂ ಹೋಗಿದ್ರೂ ಮತ್ತೊಮ್ಮೆ ವಾಶ್‌ರೂಮಿಗೆ ಹೋಗಿ ಒಂಥರಾ ವಲಸೆ ಜನಾಂಗ ಗಲಾಟೆಯೊಂದಿಗೆ ಊರು ಬಿಟ್ಟು ಹೊರಡುವಂತೆ ಆಗ್ತಿತ್ತು. ಬಸ್ಸು ಹತ್ತಿ ಇನ್ನೂ ಮೂರು ನಿಮಿಷವೂ ಕಳೆದಿರಲಿಲ್ಲ. ಮೂರು ವರ್ಷದ ಮಗಳು 'ನೀಯೂ' ಅಂತ ಶುರುಮಾಡ್ತು.

ಬೆಳಿಗ್ಗೆಯಿಂದಲೇ 'ನೀರು ಕುಡಿಬೇಡ ಜಾಸ್ತಿ, ದೂರ ಹೋಗಬೇಕು' ಅಂತ ಹೆದರಿಸಿ ಅವಳ ಬಾಯಾರಿಕೆ ಹೆಚ್ಚಿರಬಹುದು ಅನ್ನಿಸಿ ನೀರು ಕೊಟ್ಟೆ. ಇದು ಹಾಸನಕ್ಕೆ ತಲುಪುವ ಅರ್ಧ ಗಂಟೆ ಪ್ರಯಾಣದಲ್ಲಿ ಮೂರು ಬಾರಿ ರಿಪೀಟ್ ಆದಾಗ, 'ನೀಯೂ' ಬಾಯಾರಿಕೆಗಲ್ಲ ಅನ್ನಿಸಿ ತುಸು ಗದರಿಸಿ

